


# ಗಂಗೆ ತಂದ ನಿರ್ದೇಶಕನ 'ವಾರಾಣಸಿ'

ಆಂಧ್ರಪ್ರದೇಶದ ಸಂಪ್ರದಾಯಸ್ಥರ ಮನೆ. ಒಮ್ಮೆ ತಂದೆ ಮಗನ ಕೈಗೆ ಸ್ವಲ್ಪ ಹಣವನ್ನಿತ್ತು, 'ಅಲಹಾಬಾದ್‌ಗೆ ಹೋಗಿ, ತ್ರಿವೇಣಿ ಸಂಗಮದಿಂದ ಎಷ್ಟು ಸಾಧ್ಯವೋ ಅಷ್ಟು ಗಂಗಾಜಲವನ್ನು ಕ್ಯಾನ್‌ಗಳಲ್ಲಿ ತುಂಬಿಸಿಕೊಂಡು ತೆಗೆದುಕೊಂಡು ಬಾ' ಎಂದು ಆಣತಿ ಕೊಟ್ಟರು. ತಂದೆಯ ಮಾತನ್ನು ಕಣ್ಣಿಗೆ ಒತ್ತಿಕೊಂಡ ಮಗ ರೈಲು ಹತ್ತಿಯೇ ಬಿಟ್ಟ. ಎರಡನೇ ದರ್ಜೆಯಲ್ಲಿ ಪ್ರಯಾಣ. ಸಾಗುವಾಗ ಯಾರೋ ಒಬ್ಬರು ಮಾತಾಡಿಸಿದರು. ಪ್ರಯಾಣದ ಉದ್ದೇಶ ಏನು ಎಂದು ಕೇಳಿದರು. ಅಲಹಾಬಾದ್‌ಗೆ ಹೋಗುತ್ತಿರುವುದಾಗಿಯೂ, ಅಲ್ಲಿಂದ ಗಂಗಾಜಲ ತರುವಂತೆ ತಂದೆ ಆಜ್ಞೆ ಮಾಡಿದ್ದಾರೆಂದೂ ಮಗ ಹೇಳಿದ. 'ಓ... ಗಂಗಾಮಾತೆಗಾಗಿ ಹೋಗುತ್ತಿರುವೆಯಾ? ಅಲಹಾಬಾದ್‌ನಲ್ಲಿ ಯಾರ ಪರಿಚಯವಿದೆ? ಗಂಗೆಯನ್ನು ತುಂಬಿಸಿಕೊಂಡು ಬರಲು ಏನು ವ್ಯವಸ್ಥೆ ಮಾಡಿಕೊಂಡಿರುವೆ?' ಎಂದೆಲ್ಲ ಕೇಳಿದರು. ಗಂಗೆಗಾಗಿ ಹೊರಟ ಹುಡುಗನಿಗೆ ಯಾರ ಪರಿಚಯವೂ ಇರಲಿಲ್ಲ. ಹೀಗಾಗಿ ಗೋಣಾಡಿಸಿದ. ವಿಚಾರಿಸಿದ ವ್ಯಕ್ತಿ ಒಂದು ಪತ್ರ ಬರೆದುಕೊಟ್ಟರು. ಅಲಹಾಬಾದ್‌ನಲ್ಲಿ ತಮ್ಮ ಮಗನಿದ್ದು, ಅವನಿಗೆ ಪತ್ರ ತಲುಪಿಸಿದರೆ ಸಹಾಯ ಮಾಡುತ್ತಾನೆ ಎಂದು ವಿಳಾಸ ಕೊಟ್ಟರು.

ಅಲಹಾಬಾದ್ ತಲುಪಿ, ಪ್ರಯಾಣದಲ್ಲಿ ಸಿಕ್ಕಿದ್ದ ವ್ಯಕ್ತಿಯ ಮಗ ಇರುವಲ್ಲಿಗೆ ತಲುಪಿದ್ದಾಯಿತು. ಪತ್ರವನ್ನು ಓದಿದ ವ್ಯಕ್ತಿಯು, 'ಓ... ಗಂಗಾಮಾತೆಗಾಗಿ ಬಂದಿರುವೆಯಾ?' ಎಂದು ಉದ್ಗರಿಸಿದರು. 'ನೀರು ತುಂಬಿಸಿಕೊಂಡು ಹೋಗಲು ಕ್ಯಾನ್‌ಗಳ ವ್ಯವಸ್ಥೆ ಆಗಿದೆಯೇ?' ಎಂದು ಕೇಳಿದರು. ಆಂಧ್ರಪ್ರದೇಶದ ಹುಡುಗ ಮತ್ತೆ ಗೋಣಾಡಿಸಿದ. 'ಸರಿ ನಡೆ...' ಎಂದು ಕ್ಯಾನ್‌ಗಳು ಸಿಗುವ ಕಡೆಗೆ ಕರೆದುಕೊಂಡು ಹೋದರು. ಕೈಲಿದ್ದ ಸ್ವಲ್ಪ ಹಣದಲ್ಲಿ ಬಹುಪಾಲು ಅದಕ್ಕೆ ಖರ್ಚಾಯಿತು. ಕ್ಯಾನ್‌ಗಳ ಸಮೇತ ತ್ರಿವೇಣಿ ಸಂಗಮ ತಲುಪಿದ್ದಾಯಿತು. ಅಲ್ಲಿ ನದಿಯ ದಡದಲ್ಲಿ ನೀರು ತುಂಬಿಸಿಕೊಡಲು ಇನ್ನೊಬ್ಬ ವ್ಯಕ್ತಿಯನ್ನು ಕರೆದುಕೊಂಡು ಹೋದರು. ಆದರೆ, ತ್ರಿವೇಣಿ ಸಂಗಮದಿಂದಲೇ ನೀರು ತರಬೇಕು ಎಂದು ತಂದೆ ಮಾಡಿದ್ದ ಆಜ್ಞೆ ಮತ್ತೆ ನೆನಪಾಯಿತು. ನೀರು ತುಂಬಿಸಿಕೊಡಲು ಮುಂದಾಗಿದ್ದ ವ್ಯಕ್ತಿಗೆ ದುಂಬಾಲು ಬಿದ್ದದ್ದಾಯಿತು. ದೋಣಿಯೊಂದರಲ್ಲಿ ಸಂಗಮಕ್ಕೆ ಕರೆದುಕೊಂಡು ಹೋಗಿ, ಕ್ಯಾನ್‌ಗಳಿಗೆ ಗಂಗಾಜಲ ತುಂಬಿಸಿ, 'ಇದೋ... ಗಂಗಾಮಾತೆ' ಎಂದು ಆ ವ್ಯಕ್ತಿಯೂ ಸಾರ್ಥಕ್ಯಭಾವ ವ್ಯಕ್ತಪಡಿಸಿದರು. ರೈಲು ನಿಲ್ದಾಣಕ್ಕೆ ಬಂದರೆ ಕೈಯಲ್ಲಿ ಇಪ್ಪತ್ತು ರೂಪಾಯಿ ಅಷ್ಟೇ ಉಳಿದಿತ್ತು. ಕ್ಯಾನ್‌ಗಳನ್ನು ನೋಡಿದ ಗಾರ್ಡ್ ಒಬ್ಬರು 'ಏನು' ಎಂದು ಕೇಳಿದರು. ಮತ್ತೆ ಹಳೆಯ ಕಥೆಯನ್ನೇ ಪುನರುಚ್ಚರಿಸಿದ್ದಾಯ್ತು. 'ಓ... ಗಂಗಾಮಾತೆ' ಎನ್ನುತ್ತಾ ಅವರು ಒಂದು ಗೂಡ್ಸ್ ಒಳಕ್ಕೆ ಕ್ಯಾನ್‌ಗಳನ್ನು ಇಟ್ಟು ಕೊಟ್ಟರು. ಅದರಲ್ಲೇ ಪಯಣಿಸಿ, ಗಂಗಾಮಾತೆಯನ್ನು ತನ್ನೂರಿಗೆ ಅಪ್ಪನ ಆಜ್ಞೆಯಂತೆ ತಂದದ್ದು ಆಯಿತು.

ಹಾಗೆ ಗಂಗಾಮಾತೆಯನ್ನು ತಂದವರು ಈಗ ಬಹುದೊಡ್ಡ ಸಿನಿಮಾ ನಿರ್ದೇಶಕ ಆಗಿರುವ ರಾಜಮೌಳಿ. ಗಂಗೆ ತರಲು ಹೇಳಿದ್ದು, ಅವರ ತಂದೆ– ಜನಪ್ರಿಯ ಚಿತ್ರಕಥೆ ಬರಹಗಾರ ವಿಜೇಂದ್ರ ಪ್ರಸಾದ್. ಈಗ ರಾಜಮೌಳಿ ತಮ್ಮ ಹೊಸ ಚಿತ್ರಕ್ಕೆ 'ವಾರಾಣಸಿ' ಎಂದೇ ಹೆಸರಿಟ್ಟಿದ್ದಾರೆ. ಈ ಭೂಮಿಯಲ್ಲಿ ಆಗದ ಕೆಲಸ ಎನ್ನುವುದು ಇಲ್ಲವೇ ಇಲ್ಲ. ಅದಕ್ಕೆ ತಾವು ಹಿಂದೆ ಗಂಗಾಜಲ ತಂದಿದ್ದೇ ಉದಾಹರಣೆ ಎಂದು ಅವರು ಹೇಳಿಕೊಂಡು ವರ್ಷಗಳೇ ಆಗಿವೆ. ಈಗ ಮಹೇಶ್ ಬಾಬು ಅವರನ್ನು ನಾಯಕರನ್ನಾಗಿಸಿ, ಪ್ರಿಯಾಂಕಾ ಚೋಪ್ರಾ ಅವರನ್ನು ವಿದೇಶದಿಂದ ಕರೆಸಿ ಈ ಹೊಸ ಸಿನಿಮಾ ನಿರ್ದೇಶನಕ್ಕೆ ಕೈ ಹಾಕುತ್ತಿದ್ದಾರೆ. ವಾರಾಣಸಿಯ ಸುತ್ತ ಅವರು ಏನೆಲ್ಲ ಕಥೆ ಕಟ್ಟಬಹುದು ಎನ್ನುವುದನ್ನು ನೋಡಲು ಉತ್ಸುಕರಾಗಿರುವವರ ಸಂಖ್ಯೆಯಂತೂ ದೊಡ್ಡದಿದೆ. ■

# ರಜನಿ, ಕಮಲ್ ಸಿನಿಮಾ ನಿರ್ದೇಶನಕ್ಕೆ ಧನುಷ್?



ರಜನಿಕಾಂತ್, ಕಮಲ್ ಹಾಸನ್

ರಜನಿಕಾಂತ್ ಹಾಗೂ ಕಮಲಹಾಸನ್ ಒಟ್ಟಾಗಿ ತೆರೆಮೇಲೆ ಕಾಣಿಸಿಕೊಳ್ಳಲಿದ್ದಾರೆ ಎಂಬ ಕಾರಣಕ್ಕೆ 'ತಲೈವರ್ 173' ಚಿತ್ರವು ಸದ್ದು ಮಾಡಿತ್ತು. ರಾಜ್ ಕಮಲ್ ಇಂಟರ್ ನ್ಯಾಷನಲ್ ಸಂಸ್ಥೆಯ ಮೂಲಕ ಕಮಲ್ ಇದನ್ನು ನಿರ್ಮಿಸಲು ಮುಂದಾಗಿದ್ದು, ಸುಂದರ್ ಸಿ. ನಿರ್ದೇಶಿಸಲಿದ್ದಾರೆ ಎಂದು ಘೋಷಿಸಲಾಗಿತ್ತು. ಈಗ ಸುಂದರ್‌ಈ ಸಿನಿಮಾದಿಂದ ಹೊರಬಂದಿದ್ದಾರೆ. ಅದನ್ನು ಖುದ್ದು ಸುಂದರ್ ತಿಳಿಸಿದ್ದಾರೆ.

ನಟ ಧನುಷ್ ಈ ಚಿತ್ರದ ನಿರ್ದೇಶಕನ ಕುರ್ಚಿ ಮೇಲೆ ಕೂರಲಿದ್ದಾರೆ. ಅದಕ್ಕಾಗಿ ಮಾತುಕತೆ ನಡೆಯುತ್ತಿದೆ ಎಂದು Sacnilk ವೆಬ್‌ಸೈಟ್ ವರದಿ ಮಾಡಿದೆ. ಆದರೆ, ಚಿತ್ರತಂಡದ ಯಾರೂ ಇದನ್ನು ಸ್ಪಷ್ಟಪಡಿಸಿಲ್ಲ.

ಚಿತ್ರಕಥೆ ಅಂದುಕೊಂಡ ಮಟ್ಟಕ್ಕೆ ಮೂಡಿಬರಲಿಲ್ಲ ಎಂಬ ಕಾರಣದಿಂದಾಗಿ ಸುಂದರ್ ಹೊರನಡೆದಿದ್ದಾರೆ ಎನ್ನಲಾಗುತ್ತಿದೆ. ಧನುಷ್ ಸದ್ಯ 'ತೇರೆ ಇಷ್ಕ್ ಮೇ' ಹಿಂದಿ ಚಿತ್ರದಲ್ಲಿ ಅಭಿನಯಿಸಿದ್ದು, ಅದು ನವೆಂಬರ್ 28ರಂದು ತೆರೆಕಾಣುತ್ತಿದೆ. ಅವರು ನಿರ್ದೇಶಕನ ಟೋಪಿ ತೊಡುತ್ತಾರಾ ಎಂದು ನೋಡಬೇಕಿದೆ. ■